5. ಡಿಪ್ಯೂಟಿ ಕಮ್ಮಿಷನರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಗೆ ಅವರು ಯಾವ ಕಾರಣವೂ ತಿಳಿಸಬೇಕಾಗಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದುಮಾರದವಳಗಾಗಿ ತಕ್ಕ ಫಾರಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮವಾಗಿ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದ್ ಮಾಡಲ್ಪಟ್ಟ ದರಖಾಸ್ತುಗಳು ಇದರಡೀ ರುಜು ಮಾಡಿರುವವರಿಂದ 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ತೆಗದುಕೊಳ್ಳಲ್ಪಡುವದು.

9. ದರಖಾಸ್ತುದಾರರು, ಬಂದು ಯಾ ಹೆಚ್ಚು ತಾಲ್ಲೂಕುಗಳಿಗೋಸ್ಕರವಾಗಲೀ ಪಟ್ಟು ಡಿಸ್ಟ್ರಿಕ್ಟು ಗೋಸ್ಕರವಾಗಲೀ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

10. ಕಂಟ್ರಾಕ್ಟಿನ ಷರತ್ತುಗಳು ಕುರಿತ ಯಾ ಇತರ ವಿಷಯಿಕವಾದ ವಿಶೇಷ ತಪಶೀಲುಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.

ಸ್ಯ 1887ನೇ ಇಸವಿ ಫಿಬ್ರವರೀ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೆಳೆಗಳ ಸ್ಥಿತಿ.—ಫಸಲಲ್ಲಿರುವ ಗನ್ನಾ ಮತ್ತು ನೆಲ್ಲಿನ ಬೆಳೆಗಳು ಬಳ್ಳೀ ಸ್ಥಿತಿಯಲ್ಲಿದ್ದವು. ಗನ್ನಾ ಮತ್ತು ವೈಶಾಖೀ ನೆಲ್ಲು ಬಿತ್ತಲ್ಪಟ್ಟವು; ಕಾರ್ತೀಕಿ ನೆಲ್ಲು, ಗನ್ನಾ ಮತ್ತು ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ರಾಗಿ, ಅವರೆ ಮತ್ತು ತೊಗರಿ ಕಟಾವಾದವು.

ಜನಾರೋಗ್ಯ.—ಸರ್ವತ್ರ ಚಕ್ಕನ್ನಾಗಿತ್ತು, ಜ್ವರ, ಆಮಶಂಬೆ ಕ್ಲೋಸ್‌ಪೇಟೆ, ಕ್ಯಾಕಾನಹಳ್ಳಿ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ವ್ಯಾಪಿಸಿದ್ದವು ಮತ್ತು ಕಿಡಬು ನೆಲಮಂಗಲ ತಾಲ್ಲೂಕಿನಲ್ಲಿ ಕೆಲವು ಮಟ್ಟಿಗೆ ವ್ಯಾಪಿಸಿದ್ದು.

ಜನಮರಣ.—ಜನವರೀ ತಿಂಗಳಲ್ಲಿ (ಲಕ್ಕ ಭಾರದ ದೊಡ್ಡಬಳ್ಳಾಪುರ ತಾಲ್ಲೂಕು ವಿನಾ) 741 ಮಂದಿಯೂ ಆ ಹಿಂದಿನ ತಿಂಗಳಲ್ಲಿ 907 ಮಂದಿಯೂ ಮೃತಪಟ್ಟರುತ್ತಾರೆ.

ಕಾಳ್ನಡೆ.—ಈ ತಿಂಗಳಲ್ಲಿ 1,787 ಕಾಳ್ನಡೆಯೂ ಆ ಹಿಂದಿನ ತಿಂಗಳಲ್ಲಿ 656 ಕಾಳ್ನಡೆಯೂ ಮೃತಪಟ್ಟಿರುತ್ತವೆ, ಈ ಪೈಕೀ 104 ಕಾಡುಮೃಗಗಳಿಂದ ಕೊಲ್ಲಲ್ಪಟ್ಟವು.

ಜಮ್ಮಾ.—ಸಾಗುವಳೀ ಬಗ್ಗಾಗಿ 148—2—6 ರೂಪಾಯಿಗಳು ಕಂದಾಯವುಳ್ಳ ಜಮ್ಮಾಗಳು ತೆಗದುಕೊಳ್ಳಲ್ಪಟ್ಟವು.

ಎ. ಹೆಚ್. ಮಕ್ಕೆಂಟೈರ್,
ಡಿಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೀಜವೇರಾವಾದ್ದು.—ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕಾರ್ನೆಲ್ಲು ವೇರಾವಾಯಿತು.

ಫಸಲ್ ಕಟಾವಾದ್ದು.—ತರೀಕೆರೆ ತಾಲ್ಲೂಕಿನಲ್ಲಿ ಅವರೆ, ಹುರಳಿ, ಜೊಳ ಕಟಾವಾದವು, ಕೊಪ್ಪ ಮತ್ತು ಮೂಡಗೆರೆ ತಾಲ್ಲೂಕಿನಲ್ಲಿ ಅಡಿಕೆ ಕಟಾವಾಯಿತು, ಕೊಪ್ಪ ತಾಲ್ಲೂಕಿನಲ್ಲಿ ಮೆಣಸು ಕಟಾವಾಯಿತು. ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕಿನಲ್ಲಿ ಕಡ್ಲೆ, ಗೋಧಿ ಕಟಾವಾದವು, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ ಮತ್ತು ಮೆಂತ್ಯೆ ಕಟಾವಾದವು.

ಫಸಲ್‌ಗಳ ಸ್ಥಿತಿ.—ತರೀಕೆರೆ, ಕೊಪ್ಪ, ಚಿಕ್ಕಮಗಳೂರು ವ ಮೂಡಗೆರೆ ತಾಲ್ಲೂಕುಗಳಲ್ಲಿ ಸಾಧಾರಣವಾಗಿಯೂ ಕಡೂರು ತಾಲ್ಲೂಕಿನಲ್ಲಿ ವಳ್ಳೀ ಸ್ಥಿತಿಯಲ್ಲೂ ಇವೆ.

ಕಾಲಸ್ಥಿತಿ.—ಚನ್ನಾಗಿಧೆ.

ಜನಾರೋಗ್ಯ.—ಚಿಕ್ಕಮಗಳೂರು ವ ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಪಿಡುಬು ಬಹಳ ಬಲವಾಗಿದೆ, ಕೊಪ್ಪ, ಚಿಕ್ಕಮಗಳೂರು ವ ಕಡೂರು ತಾಲ್ಲೂಕುಗಳಲ್ಲಿ ಜ್ವರ ವ್ಯಾಪಿಸಿತ್ತು.

ಕಾಲ್ನಡೆ.—ಕಾಲ್ನಡೆಗಳ ಸ್ಥಿತಿ ಸರ್ವತ್ರ ಚನ್ನಾಗಿಧೆ. ಈ ತೆಂಗಳೊಳಗೆ 412 ಆ ಹಿಂದಿನ ತಿಂಗಳಲ್ಲಿ 1,591 ಕಾಲ್ನಡೆಗಳು ಮೃತಪಟ್ಟವು. ನೀರು ಮತ್ತು ಮೇವು ಸಾಧಾರಣವಾಗಿಧೆ.

ಜಮ್ಮಿ.—ಸಾಗುವಳೀ ಬಗ್ಗಾಗಿ 144—12—0 ರೂಪಾಯಿಗಳ ಕಂದಾಯವುಳ್ಳ ಜಮ್ಮಿಗಳು ತೆಗದುಕೊಳ್ಳಲ್ಪಟ್ಟವು.

ನಿರಖು.—ತಗ್ಗು ತಲಿಧೆ.

ಬಿ. ಕೃಷ್ಣಯ್ಯಂಗಾರ್,
ಫಾರ್ ಡಿಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತೋಟಗಳ ಇಲಾಖಾ.

ನೋಟೀಸ್.

ತಾರೀಖು 15ನೇ ಮಾರ್ಚೀ 1887.

ಮಾವು, ಹಲಸು, ಪನ್ನೇರಳೆ ವ ಲಕೋಟೆ ಮುಂತಾದ ಗಿಡಗಳಲ್ಲಿರುವ ಫಸಲು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ವ ತಾರೀಖುಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಲಾಲ್‌ಬಾಗ್— ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 4ನೇ ಸೋಮವಾರ ಮಧ್ಯಾನ್ಹ 12 ಘಂಟೆಗೆ ಸೂಪರ್‌ಟೆಂಡೆಂಟರ ವರ ಆಫೀಸಿನಲ್ಲಿ.

ಕಬ್ಬನ್‌ಪಾರ್ಕ್—ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 5ನೇ ಮಂಗಳವಾರ ಪ್ರಾತಃಕಾಲ 8 ಘಂಟೆಗೆ.

ಅರಮನೆ ತೋಟ—(ಗ್ಯಾರಟ್‌ಸನ್ನಜೇಬರ ಮಾವಿನ ತೋಪು ಸಹ) ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 6ನೇ ಗುರುವಾರ ಪ್ರಾತಃಕಾಲ 8 ಘಂಟೆಗೆ.

ಜೆ. ಕ್ಯಾಮರ್ಜ್,
ಸೂಪರ್‌ಟೆಂಡೆಂಟ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.